

## ಮಂಗ ಮಾಯ!

ಮೊನ್ನೆ ನನ್ನೂರು ಶಿರ್ವ (ಉಡುಪಿ ತಾಲೂಕು) ಕ್ಕೆ ಹೋದಾಗ ಮಿತ್ರರೊಬ್ಬರ ತೆಂಗಿನ ತೋಟದಲ್ಲಿ ವಿಶೇಷವೊಂದನ್ನು ಕಂಡೆ. ತಂಪು ಪಾನೀಯದ ಖಾಲಿ ಬಾಟಲಿನೊಳಗೆ ಯಾವುದೋ ದ್ರಾವಣ ಹಾಕಿ ತೆಂಗಿನ ಮರಕ್ಕೆ ಕಟ್ಟಿದ್ದರು. ಕುತೂಹಲ ತಡೆಯಲಾರದೆ ಅದೇನೆಂದು ಕೇಳಿದೆ. ಅದಕ್ಕೆ ಅವರು ಕೊಟ್ಟ ಉತ್ತರ ತುಂಬ ಸ್ವಾರಸ್ಯಕರವಾಗಿತ್ತು. ಖಾಲಿ ಪ್ಲಾಸ್ಟಿಕ್ ಬಾಟಲಿಯಲ್ಲಿ ಮೀನಿನ ಜತೆಗೆ ನೀರನ್ನು ಸೇರಿಸಿ ತೆಂಗಿನಮರ, ಬಾಳೆಯ ಗಿಡಕ್ಕೆ ಕಟ್ಟಿದರೆ ಮಂಗಗಳು ಹತ್ತಿರ ಬರುವುದಿಲ್ಲವಂತೆ. ಇಲ್ಲವಾದರೆ ವಾನರ ಸೇನೆ ಎಲ್ಲ ಬೊಂಡ (ಎಳನೀರು), ಬಾಳೆ ಗೊನೆಗಳನ್ನು ತಿಂದು ಹಾಳು ಮಾಡುತ್ತದೆ ಮಾರಾಯ್ರೆ.... ಅದಕ್ಕೇ ಈ ಉಪಾಯ ಎಂದರು. ಬಹುಶಃ ಸಸ್ಯಾಹಾರಿಗಳಾದ ಮಂಗಗಳು ಮೀನಿನ ವಾಸನೆಗೆ ದೂರ ಓಡುತ್ತಿರಬಹುದು.

ಚಿತ್ರ- ಬರಹ:
**ಧರ್ಮಾನಂದ ಶಿರ್ವ, ಬೆಂಗಳೂರು**

## ಗುಳದ ಸೊಪ್ಪು

ಮತ್ತಿ ಸೊಪ್ಪನ್ನು ಹೋಲುವ ಇದು ಎಲೆ ಗುಳದ ಸೊಪ್ಪಾಗಿರುತ್ತದೆ. ತೇಗದ ಮರದಂತೆ ಎತ್ತರವಾಗಿ ಬೆಳೆಯುವ ಈ ಮರದ ಸೊಪ್ಪನ್ನು ಅರೆದು ತಲೆಗೆ ಹಚ್ಚಿದರೆ ಹರಳೆಣ್ಣೆ ಜಿಡ್ಡನ್ನು ತೆಗೆಯುತ್ತದೆ. ಸೊಪ್ಪನ್ನು ಜಜ್ಜಿ ಇಡಲಾಗುತ್ತದೆ. ಅದು ನೆನೆದ ನಂತರ ಅಂಟಂಟಾಗಿ ನೊರೆ ಬರುತ್ತದೆ. ಸುವಾಸನೆಯಿಂದ ಕೂಡಿದ ಅದನ್ನು ಎರೆದುಕೊಳ್ಳುವಾಗ ಬಳಸಲಾಗುತ್ತದೆ. ಸೀಗೆಪುಡಿ ಜೊತೆಗೆ, ಗುಳದ ರಾಳವನ್ನು ತಲೆಗೆ ತಿಕ್ಕಿಕೊಂಡಾಗ ಹರಳೆಣ್ಣೆ ಜಿಡ್ಡು ನೊರೆ ನೊರೆಯಾಗಿ ಹೊರಬರುತ್ತದೆ. ಈ ಸೊಪ್ಪನ್ನು ಸಂಸ್ಕರಿಸಿ ಜುಜ್ಜಲು ಪುಡಿ ತಯಾರಿಸಿ ಮಾರಾಟ ಮಾಡಲಾಗುತ್ತದೆ. ಅದನ್ನು ಸೀಗೆಪುಡಿಯೊಂದಿಗೆ ತಲೆಗೆ ಲೇಪನ ಮಾಡಲಾಗುವುದು. ಶಾಂಪೂ ಬಂದ ಮೇಲೆ ಇದೆಲ್ಲ ಮರೆತೇಹೋಗಿದೆ ಎನ್ನಬಹುದು.

**-ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ**



## ಡೇರೆ ಹೂವಿನ ದರ್ಬಾರ್!

ಉತ್ತರ ಕನ್ನಡ ಜಿಲ್ಲೆಯ ಅಪ್ಪಟ ಮಲೆನಾಡಿನಲ್ಲಿರುವ ಶಿರಸಿಯ ಹಳ್ಳಿಹಳ್ಳಿಗಳ ಮನೆಯಂಗಳದಲ್ಲೀಗ ಡೇರೆ ಹೂವಿನದೇ ದರ್ಬಾರ್! ಬೇಸಿಗೆಯಲ್ಲಿ ನೆಲದಡಿ ಅಡಗಿರುವ ಈ ಡೇರೆ ಹೂವಿನ ಗೆಡ್ಡೆಗಳು ಮೊದಲ ಮಳೆಯ ಸಿಂಚನದಲ್ಲೇ ಮೊಳಕೆಯೊಡೆದು ಹಸಿರು ಚಿಗುರಿ ಕಾಣಿಸಿ ಕೊಳ್ಳುತ್ತವೆ. ತಿಂಗಳೊಳಗೆ ಮೊಗ್ಗು ಬಿಟ್ಟು ವಿವಿಧ ಆಕೃತಿಯ ಬಣ್ಣ ಬಣ್ಣದ ಡೇರೆ ಹೂಗಳು ಅರಳಿ ರಂಗಿನನೋಟ ನೀಡುತ್ತವೆ. ಹೊಸದಾಗಿ ಮದುವೆಯಾಗಿ ಬಂದ ಹುಡುಗಿಯರ ಮನೆಯಂಗಳದಲ್ಲಂತೂ ಈ ಹೂಗಳು ದ್ವಿಗುಣವಾಗಿರುತ್ತವೆ. ಯಾಕೆಂದರೆ ಆ ಹುಡುಗಿ ತನ್ನ ತವರಿನಿಂದ ತಂದ ಹೊಸ ಜಾತಿಯ ಹೂಗಳೂ ಅಲ್ಲೀಗ ಅರಳಿರುತ್ತವೆ.

ಈ ಹೂವಿನ ಗಿಡದ ವಿಶೇಷವೆಂದರೆ ಕರಾವಳಿಯ ನೆಲದಲ್ಲಿ ಎಷ್ಟು ಆರೈಕೆ ಮಾಡಿದರೂ ಇವು ಬದುಕುವುದಿಲ್ಲ. ಮಣ್ಣು, ಹವಾಮಾನ ಕಾರಣವಿರಬಹುದು. ಆದರೆ ಈ ಹೂವಿನ ಗೆಡ್ಡೆಗಳಿಗೆ ಕಡಲ ತೆರೆಗಳ ಸದ್ದು ಆಗದು ಎಂಬ ತಮಾಷೆಯ ಮಾತಿದೆ.

ಚಿತ್ರದಲ್ಲಿರುವ ಚಂದದ ಹೂಗಳು ಅರಳಿದ್ದು ಶಿರಸಿಯ ಉಮ್ಮಚಗಿ ವೇದಿಕಾ ಹೆಗಡೆಯವರ ಮನೆಯಂಗಳದಲ್ಲಿ.

**-ಜಯಾ ಯಾಜಿ, ಶಿರಾಲಿ**



